# ಜಿಲ್ಲಾ ಪಂಚಾಯತ್, ರಾಯಚೂರು

ಸಂ:ಜಿಪಂಕ/ಕೈವಿ/ಆನ್‌ಲೈನ್‌ಅರ್ಜಿ/2024-25 ದಿನಾಂಕ:- 09-09-2024.

## ಅಧಿಸೂಚನೆ

ಜಿಲ್ಲಾ ಪಂಚಾಯತ್, ರಾಯಚೂರು (ಕೈಗಾರಿಕಾ ವಿಭಾಗ)ದ 2024-25ನೇ ಸಾಲಿನ ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯಡಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಉಚಿತವಾಗಿ ಮೋಟಾರ್ ಸಹಿತ ಹೊಲಿಗೆಯಂತ್ರ ವಿತರಣೆಗಾಗಿ ಜಿಲ್ಲಾ ವಲಯದಡಿ ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಒಟ್ಟು 816 ಹೊಲಿಗೆ ತರಬೇತಿ ಹೊಂದಿದ/ವೃತ್ತಿನಿರತ ಮಹಿಳಾ ಕುಶಲಕರ್ಮಿಗಳಿಗೆ ಉಚಿತವಾಗಿ ಮೋಟಾರ್ ಸಹಿತ ಹೊಲಿಗೆಯಂತ್ರಗಳನ್ನು ವಿತರಿಸಬೇಕಾಗಿದ್ದರಿಂದ ಈ ಕೆಳನಂತೆ ತಾಲೂಕಾವಾರು ಹಾಗೂ ಪ್ರವರ್ಗವಾರು ಗುರಿ ನಿಗದಿಪಡಿಸಿ, ದಿನಾಂಕ:- 13-09-2024 ರಿಂದ ದಿನಾಂಕ:-15-10-2024ರವರೆಗೆ ವೆಬ್‌ಸೈಟ್ www.raichur.nic.in ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಕಾರ್ಯಕ್ರಮ ವಿವರ | ಪ್ರವರ್ಗ | ಜಿಲ್ಲಾ ಗುರಿ | ರಾಯ ಚೂರು | ದೇವ ದುರ್ಗ | ಮಾನವಿ | ಸಿರ ವಾರ | ಲಿಂಗ ಸೂಗೂರು | ಮಸ್ಕಿ | ಸಿಂಧ ನೂರು | ಒಟ್ಟು |
|---|---|---|---|---|---|---|---|---|---|---|---|
| 01 | ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯಡಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಉಚಿತವಾಗಿ ಮೋಟಾರ್ ಸಹಿತ ಹೊಲಿಗೆ ಯಂತ್ರ ವಿತರಣೆ | ಪರಿಶಿಷ್ಟ ಜಾತಿ | 816 | 27 | 19 | 15 | 15 | 27 | 19 | 19 | 141 |
| | | ಪರಿಶಿಷ್ಟ ಪಂಗಡ | | 12 | 9 | 8 | 8 | 12 | 9 | 9 | 67 |
| | | ಅಲ್ಪ ಸಂಖ್ಯಾತ | | 24 | 17 | 13 | 13 | 24 | 17 | 17 | 125 |
| | | ಇತರೆ | | 92 | 65 | 52 | 52 | 92 | 65 | 65 | 483 |
| | | | ಒಟ್ಟು | 155 | 110 | 88 | 38 | 155 | 110 | 110 | 816 |

**ಅರ್ಹತೆಗಳು :**

- ಮೋಟಾರ್ ಸಹಿತ ಹೊಲಿಗೆಯಂತ್ರ ಪಡೆಯುವದಕ್ಕಾಗಿ ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶಕ್ಕೊಳಪಡುವ ಮಹಿಳಾ ಅಭ್ಯರ್ಥಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
  **(ಪಟ್ಟಣ ಪಂಚಾಯತ್/ಪುರಸಭೆ/ನಗರಸಭೆಗೊಳಪಡುವ ಮಹಿಳೆಯರು ಸದರಿ ಯೋಜನೆಗೆ ಅರ್ಹರಲ್ಲ)**
- ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ಕನಿಷ್ಠ 21 ವರ್ಷ ಹಾಗೂ ಗರಿಷ್ಠ 45 ವರ್ಷಗಳು ಇರತಕ್ಕದ್ದು (ಅರ್ಜಿ ಸಲ್ಲಿಸುವ ಪ್ರಾರಂಭವಾಗುವ ದಿನಾಂಕದಂದು)
- ಅರ್ಜಿದಾರರು ಕನಿಷ್ಠ 7ನೇ ತರಗತಿ ಉತ್ತೀರ್ಣಗಾಗಿರಬೇಕು.
- ಅರ್ಜಿದಾರರು ಹೊಲಿಗೆ ವೃತ್ತಿಯಲ್ಲಿ ತರಬೇತಿ ಪಡೆದಿರಬೇಕು (ಪ್ರಮಾಣ ಪತ್ರ ಲಗತ್ತಿಸುವುದು)
- ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
- ಸರಕಾರದ ಯಾವುದೇ ಯೋಜನೆಯಡಿ ಈಗಾಗಲೇ ಹೊಲಿಗೆಯಂತ್ರವನ್ನು ಪಡೆದಿರುವ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅರ್ಹವಿರುವುದಿಲ್ಲ.
- ಆನ್‌ಲೈನ್‌ನಲ್ಲಿ www.raichur.nic.in ವೆಬ್‌ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು. (**ಸೂಚನೆ:- ಅರ್ಜಿದಾರರು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಅರ್ಜಿಯ ಪ್ರತಿಯೊಂದಿಗೆ ಅಪ್ಲೋಡ್ ಮಾಡಲಾದ ಎಲ್ಲಾ ದಾಖಲಾತಿಗಳ ಒಂದು ಪ್ರತಿಯನ್ನು ಉಪ ನಿರ್ದೇಶಕರ ಕಛೇರಿ (ಗ್ರಾಮೀಣ ಕೈಗಾರಿಕೆ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹೈದರಾಬಾದ್ ಮತ್ತೆ ರಾಯಚೂರು ಇಲ್ಲಿ ದಿನಾಂಕ:-19-10-2024ರೊಳಗಾಗಿ ಕಡ್ಡಾಯವಾಗಿ ಸಲ್ಲಿಸುವುದು**)
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

2ನೇ ಪುಟಕ್ಕೆ...

**ಅಪ್ಲೋಡ್ ಮಾಡಬೇಕಾದ ದಾಖಲೆಗಳು (ಸ್ವಯಂ ದೃಢೀಕೃತ ಪ್ರತಿಗಳು):-**

- ಆಧಾರ ಕಾರ್ಡ್.
- ಪಡಿತರ ಚೀಟಿ.
- ಜಾತಿ ಪ್ರಮಾಣ ಪತ್ರ (ಪ.ಜಾ/ಪ.ಪಂ/ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಮಾತ್ರ)
- ಹೊಲಿಗೆಯಂತ್ರ ತರಬೇತಿ ಪಡೆದ ಪ್ರಮಾಣ ಪತ್ರ/ ಆಯಾ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ಹೊಲಿಗೆ (ಟೇಲರಿಂಗ್)ವೃತ್ತಿಯಲ್ಲಿ ತರಬೇತಿ ಹೊಂದಿರುವ/ವೃತ್ತಿಯಲ್ಲಿ ತೊಡಗಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರ.
- ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ವರ್ಗಾವಣೆ ಪ್ರಮಾಣ ಪತ್ರ/ಅಂಕಪಟ್ಟಿ/ಇನ್ನಿತರ ಪ್ರಮಾಣ ಪತ್ರ)
- ಅಭ್ಯರ್ಥಿ ವಿಕಲಚೇತನ/ವಿಧವಾ ಪ್ರಮಾಣ ಪತ್ರ ಇದ್ದಲ್ಲಿ.
- ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ
- ಶೈಕ್ಷಣಿಕ ಅರ್ಹತೆ (ವರ್ಗಾವಣೆ ಪ್ರಮಾಣ ಪತ್ರ/ಅಂಕಪಟ್ಟಿ/ಇನ್ನಿತರ ಪ್ರಮಾಣ ಪತ್ರ)

**ಆಯ್ಕೆ ಪ್ರಕ್ರಿಯೆ:-**

- ನಿಗದಿಪಡಿಸಿದ ಗುರಿಗಿಂತ ಅಧಿಕ ಅರ್ಹ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ,ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- **ವಿವಿಧ ಇಲಾಖೆಗಳಡಿ ಹೊಲಿಗೆಯಂತ್ರ ತರಬೇತಿ ಪಡೆದು ತರಬೇತಿ ಪ್ರಮಾಣ ಪತ್ರ ಹೊಂದಿದವರಿಗೆ ಮೊದಲ ಆದ್ಯತೆ ನೀಡಲಾಗುವುದು**

ಹೆಚ್ಚಿನ ಮಾಹಿತಿಗಾಗಿ, **ಉಪ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ) ರವರ ಕಛೇರಿ**, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಿಲ್ಲಾ ಪಂಚಾಯತ್ ಹೈದಾರಬಾದ ರಸ್ತೆ ರಾಯಚೂರು ಇವರಿಗೆ ಸಂಪರ್ಕಿಸಬಹುದಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ರಾಯಚೂರು.

ಪ್ರತಿಯನ್ನು :

1) ಜಿಲ್ಲಾ ಮಾಹಿತಿ ಅಧಿಕಾರಿಗಳು, ಎನ್.ಐ.ಸಿ., ರಾಯಚೂರು ಇವರ ಮಾಹಿತಿಗಾಗಿ ಹಾಗೂ ಅರ್ಜಿದಾರರು ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಲು ಆನ್‌ಲೈನ್ ಅರ್ಜಿಯನ್ನು ಅಭಿವೃದ್ಧಿ ಪಡಿಸಲು ಸೂಚಿಸಿದೆ.
2) ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ್, ರಾಯಚೂರು/ದೇವದುರ್ಗ/ ಮಾನವಿ/ಲಿಂಗಸೂಗೂರು / ಮಸ್ಕಿ/ಸಿರವಾರ/ಸಿಂಧನೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
3) ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ತಮ್ಮ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರಗೊಳಿಸಲು ಸೂಚಿಸಿದೆ.